ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆರೋಗ್ಯಾಧಿಕಾರಿಗಳ ಕಛೇರಿ (ಸಾ.ಆ), ಬಿ.ಬಿ.ಎಂ.ಪಿ ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-02.ಫೋನ್:080-22110445

ಸಂಖ್ಯೆ: ಪಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿ.ಆರ್/23/2015-16 ದಿನಾಂಕ: 20-08-2016

## ಅಧಿಸೂಚನೆ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ) ವತಿಯಿಂದ ಬಿಬಿಎಂಪಿಯ ಆರೋಗ್ಯ ಇಲಾಖೆಯಲ್ಲಿ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಸಂಚಿತ ವೇತನ ನೀಡಿ ಈ ಕೆಳಕಂಡ ಹುದ್ದೆಗಳಿಗೆ ಸಂಪೂರ್ಣ ಮೆರಿಟ್ ಆಧಾರದ ಮೇಲೆ ನೇರ ಆಯ್ಕೆ(walk-in selection) ಮುಖಾಂತರ ಭರ್ತಿ ಮಾಡಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಹುದ್ದೆಗಳು:**

**ಅ) ವೈದ್ಯಾಧಿಕಾರಿಗಳು/ವಿಶೇಷ ತಜ್ಞವೈದ್ಯರುಗಳ ಹುದ್ದೆಗಳು :-**
ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳು -52, ಪ್ರಸೂತಿ ತಜ್ಞರು -04, ಅರಿವಳಿಕೆ ತಜ್ಞರು -02, ಮಕ್ಕಳ ತಜ್ಞರು -06 ಫಿಸಿಷಿಯನ್ -06, ರೇಡಿಯಾಲಜಿಸ್ಟ್ -06.

**ಆ) ಅರೆ-ವೈದ್ಯಕೀಯ ಮತ್ತು ಇತರೆ ಹುದ್ದೆಗಳು :-**
ಶುಶ್ರೂಷಕಿಯರು -104, ಪ್ರಯೋಗಶಾಲಾ ತಂತ್ರಜ್ಞರು -41, ಫಾರ್ಮಸಿಸ್ಟ್ -66, ಎ.ಎನ್.ಎಂ -330
ಎಪಿಡೆಮಿಯಾಲಜಿಸ್ಟ್ -06, ವಲಯ ಕಾರ್ಯಕ್ರಮ ವ್ಯವಸ್ಥಾಪಕರು -05, ವಲಯ ಲೆಕ್ಕಪತ್ರ ವ್ಯವಸ್ಥಾಪಕರು-06

**ನೇರ ಆಯ್ಕೆ ದಿನಾಂಕಗಳು** :- 01-09-2016, 02-09-2016 ಮತ್ತು 03-09-2016.

**ನೇರ ಆಯ್ಕೆ ನಡೆಯುವ ಸ್ಥಳ** :- ಐ.ಪಿ.ಪಿ ನಗರ ಆರೋಗ್ಯ ಸಂಶೋಧನ ಕೇಂದ್ರ, 16ನೇ ಅಡ್ಡರಸ್ತೆ, ಕೋದಂಡರಾಮಪುರ, ಮಲ್ಲೇಶ್ವರಂ, ಬೆಂಗಳೂರು.

**ಸಮಯ** :- ಮೇಲಿನ ಎಲ್ಲಾ 03 ದಿನಗಳು ಬೆಳಿಗ್ಗೆ 11.00 ಗಂಟೆಯಿಂದ ಸಾಯಂಕಾಲ 4.00ರವರೆಗೆ.

ಶೈಕ್ಷಣಿಕ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ವಿಂಗಡನ ಪ್ರಕ್ರಿಯೆ, ವೇತನ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯಮಾಡಿ ಬಿಬಿಎಂಪಿಯ ವೆಬ್‌ಸೈಟ್ (**www.bbmp.gov.in**)ನೇಮಕಾತಿ ಭಾಗದಲ್ಲಿ ನೋಡಲು ಕೋರಿದೆ.

**ಪ್ರಮುಖ ಸೂಚನೆ:-**

ನೇರ ಆಯ್ಕೆಗೆ ಅಗತ್ಯ ಮೂಲ ದಾಖಲಾತಿಗಳೊಂದಿಗೆ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗತಕ್ಕದ್ದು.
ನೇರ ಆಯ್ಕೆಗೆ ಅಭ್ಯರ್ಥಿಗಳು ಚೆಕ್‌ಲಿಸ್ಟ್‌ನೊಂದಿಗೆ ಹಾಜರಾಗತಕ್ಕದ್ದು.
ನೇರ ಆಯ್ಕೆಗೆ ಯಾವುದೇ ರೀತಿಯ ಪ್ರಯಾಣ/ದಿನ ಭತ್ಯೆ ನೀಡಲಾಗುವುದಿಲ್ಲ.
ನೇರ ಆಯ್ಕೆಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಯು 07 ಕರ್ತವ್ಯದ ದಿನಗಳೊಳಗಾಗಿ ನಿಯೋಜಿಸಿದ ಸ್ಥಳದಲ್ಲಿ ವರದಿ ಮಾಡಿಕೊಂಡ ಕರ್ತವ್ಯಕ್ಕೆ ಹಾಜರಾಗುವುದು.
ಮೇಲ್ಕಂಡ ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚಿಸುವ/ ಕಡಿತಗೊಳಿಸುವ ಅಧಿಕಾರವನ್ನು ಬೆಂಗಳೂರು ನಗರ ಆರೋಗ್ಯ & ಕುಟುಂಬ ಕಲ್ಯಾಣ ಸೊಸೈಟಿ(ರಿ) ತನ್ನಲ್ಲಿ ಹೊಂದಿದೆ.

ಸಹಿ/-
ಅಧ್ಯಕ್ಷರು
ಬೆಂಗಳೂರು ನಗರ ಆರೋಗ್ಯ &ಕುಟುಂಬ ಕಲ್ಯಾಣ
ಸೊಸೈಟಿ(ರಿ), ರಾಷ್ಟ್ರೀಯ ನಗರ ಆರೋಗ್ಯ
ಅಭಿಯಾನ
ಬಿಬಿಎಂಪಿ, ಬೆಂಗಳೂರು.

**ಭಾಗ–1**

# ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ಇತರೆ ಕರ್ನಾಟಕ ಪ್ರದೇಶಕ್ಕೆ ನೇರ ಆಯ್ಕೆಗೆ (walk-in selection) ಅನ್ವಯವಾಗುವ ಹುದ್ದೆಗಳು.

| SL. No | Name of the post | Educational Qualification | Total No. of Posts | Category | Back Log Posts | Fresh posts | Consolidated Pay |
|---|---|---|---|---|---|---|---|
| 1 | Medical officer (ವೈದ್ಯರು) | Only MBBS Degree Registered in Medical Council | 47 | SC | 0 | 08 | Rs. 45,000/- |
| | | | | ST | 0 | 01 | |
| | | | | Cat-1 | 0 | 02 | |
| | | | | 2A | 0 | 07 | |
| | | | | 2B | 0 | 02 | |
| | | | | 3A | 0 | 02 | |
| | | | | 3B | 0 | 02 | |
| | | | | GM | 0 | 23 | |
| 2 | Staff Nurse (ಶುಶ್ರೂಷಕಿಯರು) | B Sc /GNM/Diploma Nursing Registered in Karnataka Nursing Council | 96 | SC | 0 | 15 | Rs.15000/- |
| | | | | ST | 0 | 03 | |
| | | | | Cat-1 | 0 | 04 | |
| | | | | 2A | 0 | 14 | |
| | | | | 2B | 0 | 04 | |
| | | | | 3A | 0 | 04 | |
| | | | | 3B | 0 | 04 | |
| | | | | GM | 0 | 48 | |
| 2 | Pharmacist (ಫಾರ್ಮಾಸಿಸ್ಟ್) | B-Pharma / D-Pharma Registered in Karnataka Para Medical Board | 61 | SC | 09 | 08 | Rs. 15000/- |
| | | | | ST | 0 | 01 | |
| | | | | Cat-1 | 01 | 02 | |
| | | | | 2A | 0 | 07 | |
| | | | | 2B | 0 | 02 | |
| | | | | 3A | 0 | 02 | |
| | | | | 3B | 0 | 03 | |
| | | | | GM | 0 | 26 | |
| 3 | Lab Technician (ಪ್ರಯೋಗಶಾಲಾ ತಂತ್ರಜ್ಞರು) | Diploma in Lab Technology Registered in Karnataka Para Medical Board | 38 | SC | 0 | 06 | Rs.15,000/- |
| | | | | ST | 0 | 01 | |
| | | | | Cat-1 | 0 | 02 | |
| | | | | 2A | 0 | 05 | |
| | | | | 2B | 0 | 02 | |
| | | | | 3A | 0 | 01 | |
| | | | | 3B | 0 | 02 | |
| | | | | GM | 0 | 19 | |
| 4 | ANM (ಎ.ಎನ್.ಎಂ) | ANM Training Registered in Karnataka | 289 | SC | 28 | 37 | Rs.9000/- |
| | | | | ST | 03 | 08 | |
| | | | | Cat-1 | 06 | 10 | |
| | | | | 2A | 0 | 38 | |
| | | | | 2B | 0 | 10 | |
| | | | | 3A | 0 | 10 | |
| | | | | 3B | 0 | 12 | |
| | | | | GM | 0 | 127 | |

| | | | | | | | |
|---|---|---|---|---|---|---|---|
| **5** | Zonal Programme Manager (ವಲಯ ಕಾರ್ಯಕ್ರಮ ವ್ಯವಸ್ಥಾಪಕರು) | MBA (HR/Finance) preferred with 1 year of related experience in Public Health/Hospital Administration | **05** | **SC** | **01** | **0** | **Rs. 20,000/-** |
| | | | | **ST** | **01** | **0** | |
| | | | | **Cat-1** | **0** | **01** | |
| | | | | **2A** | **0** | **01** | |
| | | | | **GM** | **0** | **03** | |
| **6** | Zonal Accounts Manager (ವಲಯ ಲೆಕ್ಕಪತ್ರ ವ್ಯವಸ್ಥಾಪಕರು) | M.Com with Knowledge of Tally | **06** | **ST** | **0** | **01** | **Rs. 15,000/-** |
| | | | | **Cat-1** | **0** | **01** | |
| | | | | **2A** | **0** | **01** | |
| | | | | **GM** | **0** | **03** | |
| **7** | Epidemiologist (ಕೀಟ ಶಾಸ್ತ್ರಜ್ಞರು) | MBBS with post graduate degree/Diploma in preventive & social medicine/Public Health or Epidemiology(MD, DPH, MAE) OR M.Sc in Life Science, Epidemiology with MPH Qualification OR Any Degree with MPH Qualification | **06** | **ST** | **0** | **01** | **Rs. 25,000/-** |
| | | | | **Cat-1** | **0** | **01** | |
| | | | | **2A** | **0** | **01** | |
| | | | | **GM** | **0** | **03** | |

- ಫಾರ್ಮಾಸಿಸ್ಟ್ ಹುದ್ದೆಗಳಿಗೆ ಬಿ–ಫಾರ್ಮ ಮತ್ತು ಡಿ–ಫಾರ್ಮ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು, ಆದರೆ ಬಿ–ಫಾರ್ಮ ವಿದ್ಯಾರ್ಹತೆವುಳ್ಳವರಿಗೆ ಆಯ್ಕೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.
- ಬಿ.ಎಸ್ಸಿ ನರ್ಸಿಂಗ್/ಡಿಪ್ಲೋಮ ನರ್ಸಿಂಗ್/ಜಿ.ಎನ್.ಎಂ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗಳನ್ನು ಸ್ಟಾಫ್‌ನರ್ಸ್ ಹುದ್ದೆಗೆ ಪರಿಗಣಿಸಲಾಗುವುದು, ಆದರೆ ಡಿಪ್ಲೋಮ ನರ್ಸಿಂಗ್/ಜಿ.ಎನ್.ಎಂ ಗಿಂತ, ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗೆ ಆಯ್ಕೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.

**ಭಾಗ–2**

## ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇರ ಆಯ್ಕೆಗೆ (walk-in selection) ಅನ್ವಯವಾಗುವ ಹುದ್ದೆಗಳು.

| SL. No | Name of the post | Educational Qualification | Total No. of Posts | Back Log Posts | Fresh posts | Consolidated Pay |
|---|---|---|---|---|---|---|
| **1** | Medical Officer (ವೈದ್ಯರು) | Only MBBS Degree Registered in Medical Council of India | **05** | **0** | **05** | **Rs.45000/-** |
| **2** | Staff Nurse (ಶುಶ್ರೂಷಕಿಯರು) | B Sc /GNM/Diploma Nursing Registered in Karnataka Nursing Council | **08** | **0** | **08** | **Rs.15000/-** |
| **3** | Pharmacist (ಫಾರ್ಮಾಸಿಸ್ಟ್) | B-Pharma/D-Pharma Registered in Karnataka Para Medical Board | **05** | **0** | **05** | **Rs. 15000/-** |
| **4** | Lab Technician (ಪ್ರಯೋಗಶಾಲಾ ತಂತ್ರಜ್ಞರು) | Diploma in Lab Technology Registered in Karnataka Para Medical Board | **03** | **0** | **03** | **Rs.15,000/-** |
| **5** | ANM (ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು) | ANM Training Registered in Karnataka Para Medical Board | **41** | **19** | **22** | **Rs.9000/-** |

- ಫಾರ್ಮಸಿಸ್ಟ್ ಹುದ್ದೆಗಳಿಗೆ ಬಿ–ಫಾರ್ಮ ಮತ್ತು ಡಿ–ಫಾರ್ಮ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು, ಆದರೆ ಬಿ–ಫಾರ್ಮ ವಿದ್ಯಾರ್ಹತೆವುಳ್ಳವರಿಗೆ ಆಯ್ಕೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.
- ಬಿ.ಎಸ್ಸಿ ನರ್ಸಿಂಗ್/ಡಿಪ್ಲೋಮ ನರ್ಸಿಂಗ್/ಜಿ.ಎನ್.ಎಂ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗಳನ್ನು ಸ್ಟಾಫ್‌ನರ್ಸ್ ಹುದ್ದೆಗೆ ಪರಿಗಣಿಸಲಾಗುವುದು, ಆದರೆ ಡಿಪ್ಲೋಮ ನರ್ಸಿಂಗ್/ಜಿ.ಎನ್.ಎಂ ಗಿಂತ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಹತೆವುಳ್ಳ ಅಭ್ಯರ್ಥಿಗೆ ಆಯ್ಕೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.

## ಭಾಗ–2

# ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಯೋಜನೆಯಡಿ ನೇರ ಆಯ್ಕೆಗೆ ಅನ್ವಯವಾಗುವ ವಿಶೇಷ ತಜ್ಞ ವೈದ್ಯರ ಹುದ್ದೆಗಳು.

| Sl. No | Name of the Post | Qualification | No.of Post | Consolidated pay |
|---|---|---|---|---|
| 1 | Gynecologist (ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು) | DGO with minimum of 3 years of experience or M.S (OBG) or Its equivalent qualification recognised by MCI. | 04 | Rs. 1,10,000/- |
| 2 | Radiologists (ವಿಕಿರಣಾಶಾಸ್ತ್ರ ತಜ್ಞರು) | DMRD with minimum of 3 years of experience or M.D (Radiology) or Its equivalent qualification recognized by MCI. | 06 | Rs. 1,10,000/- |
| 3 | Physician (ಫಿಜಿಷಿಯನ್) | M.D (Medicine) or Its equivalent qualification recognized by MCI. | 06 | Rs. 1,10,000/- |
| 4 | Anaesthetists (ಅರವಳಿಕೆ ತಜ್ಞರು) | DA with minimum 3 yrs of experience or M.D (Anesthesia) or Its equivalent qualification recognized by MCI. | 02 | Rs. 1,10,000/- |
| 5 | Pediatricians (ಮಕ್ಕಳ ತಜ್ಞರು) | DCH with minimum of 3 years of experience or M.D (Pediatrics) or Its equivalent qualification recognized by MCI. | 06 | Rs. 1,10,000/- |

- ವಿಶೇಷ ತಜ್ಞ ವೈದ್ಯರುಗಳ ಹುದ್ದೆಗೆ ಮಾತ್ರ ಗರಿಷ್ಟ ವಯೋಮಿತಿಯನ್ನು ಹತ್ತು ವರ್ಷ ಸಡಿಲಗೊಳಿಸಲಾಗಿದೆ.
- ವಿಶೇಷ ತಜ್ಞ ವೈದ್ಯರುಗಳ ಹುದ್ದೆ ಭರ್ತಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
- ವಿಶೇಷ ತಜ್ಞವೈದ್ಯರ ಹುದ್ದೆಗಳಿಗೆ ರೋಸ್ಟರ್/ಮೀಸಲಾತಿ ಅನ್ವಯವಾಗುವುದಿಲ್ಲ

# ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ

**ದಿನಾಂಕ: 01.09.2016, 02.09.2016 ಮತ್ತು 03.09.2016ರ ವರೆಗೆ ಬಿಬಿಎಂಪಿಯ ಐ.ಪಿ.ಪಿ , ನಗರ ಆರೋಗ್ಯ ಸಂಶೋಧನಾ ಕೇಂದ್ರ, 16ನೇ ಅಡ್ಡರಸ್ತೆ, ಕೋದಂಡರಾಮಪುರಂ, ಮಲ್ಲೇಶ್ವರಂ, ಬೆಂಗಳೂರು. ಇಲ್ಲಿ ನಡೆಯಲಿರುವ ನೇರ ಆಯ್ಕೆಯಲ್ಲಿ ಪಾಲ್ಗೊಳ್ಳುವ ಅಭ್ಯರ್ಥಿಗಳಿಗೆ ಷರತ್ತು ಮತ್ತು ನಿಬಂಧನೆಗಳು:**

## ಅರ್ಹತಾ ಮಾನದಂಡಗಳು :

1. ಅಭ್ಯರ್ಥಿಯು ಭಾರತೀಯ ನಾಗರೀಕರಾಗಿರಬೇಕು.
2. ವಯೋಮಿತಿ: ಅಧಿಸೂಚನೆಯ ಕೊನೆಯ ದಿನಾಂಕದಂದು, ಅಭ್ಯರ್ಥಿಯು 18 ವರ್ಷ ಮೇಲ್ಪಟ್ಟಿರಬೇಕು ಮತ್ತು ಈ ಕೆಳಗಿನಂತೆ ವಯೋಮಿತಿಯನ್ನು ಮೀರಿರಬಾರದು.

   ಸಾಮಾನ್ಯ ವರ್ಗ : 35 ವರ್ಷ

   ಪ್ರವರ್ಗ 2ಎ/2ಬಿ/3ಬಿ : 38 ವರ್ಷ

   ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 : 40 ವರ್ಷ

   ವಿಶೇಷ ತಜ್ಞವೈದ್ಯರ ಹುದ್ದೆಗಳಿಗೆ ಮಾತ್ರ ಗರಿಷ್ಠ ವಯೋಮಿತಿಯನ್ನು 10 ವರ್ಷಗಳಿಗೆ ಸಡಿಲಗೊಳಿಸಲಾಗಿದೆ.
3. ಅಭ್ಯರ್ಥಿಗಳು ಕನ್ನಡ ಭಾಷಾ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು (ಓದಲು, ಬರೆಯಲು ಮತ್ತು ಮಾತನಾಡಲು).
4. ಶೈಕ್ಷಣಿಕ ವಿದ್ಯಾರ್ಹತೆ: ಹುದ್ದೆಗಳಿಗೆ ಅನುಸಾರವಾಗಿ ಅಧಿಸೂಚನೆಯಲ್ಲಿ ನಮೂದಿಸಿದಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.

## ಆಯ್ಕೆಯ ವಿಧಾನ:

1. ಅಭ್ಯರ್ಥಿಯ ಆಯ್ಕೆಯು ಸಂಪೂರ್ಣ ಮೆರಿಟ್ ಆಧಾರದ ಮೇಲೆ ನಡೆಯುವುದು. **ಯಾವುದೇ ಸಂದರ್ಶನ ಅಂಕಗಳು ಇರುವುದಿಲ್ಲ** ಮತ್ತು ಮೀಸಲಾತಿ ಆಧಾರದ ಮೇಲೆ ನಡೆಯುವುದು.
2. ನೇರ ಆಯ್ಕೆಯು ನಡೆಯುವ ದಿನದಂದು ಮೀಸಲು ವರ್ಗದ ಅಭ್ಯರ್ಥಿಗಳು ಹಾಜರಿರದೇ/ದೊರಕದೇ ಇದ್ದಲ್ಲಿ, ಅಂತಹ ಖಾಲಿ ಹುದ್ದೆಗಳಿಗೆ ಲಭ್ಯವಿರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನೇ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

## ಸಾಮಾನ್ಯ ಷರತ್ತುಗಳು:

1. ಮೀಸಲಾತಿ ಸೌಲಭ್ಯವನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ನಿಗಧಿತ ನಮೂನೆಯಲ್ಲಿ ಸಂಬಂಧಪಟ್ಟ ಕಂದಾಯ ಪ್ರಾಧಿಕಾರ, ತಹಸಿಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.

   ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ : ಫಾರ್ಮ್–ಡಿ

   ಪ್ರವರ್ಗ–1 : ಫಾರ್ಮ್–ಇ

   ಪ್ರವರ್ಗ 2ಎ/2ಬಿ/3ಎ/3ಬಿ : ಫಾರ್ಮ್–ಎಫ್

   (ಕರ್ನಾಟಕ ರಾಜ್ಯ ಸರ್ಕಾರದ ನಿಯಮದಂತೆ ಮಾನ್ಯತೆ ಪಡೆದ ಪ್ರವರ್ಗ 2ಎ/2ಬಿ/3ಎ/3ಬಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು, ಪ್ರಮಾಣ ಪತ್ರಗಳು ನಿಗದಿತ ಈ ಪ್ರಮಾಣ ಪತ್ರಗಳು ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು ಹಾಗೂ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರಬೇಕು. ಅವಧಿ ಮೀರಿರಬಾರದು)

2. ಜಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು ಮತ್ತು ಜಾತಿ ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ವನ್ನು ಆಯ್ಕೆಯಾದ 02 ತಿಂಗಳೊಳಗೆ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ನೇಮಕಾತಿಯನ್ನು ರದ್ದುಪಡಿಸಲಾಗುವುದು.
3. ಹೈದ್ರಾಬಾದ್–ಕರ್ನಾಟಕ ಪ್ರದೇಶದಡಿ ಮೀಸಲಾತಿ ಬಯಸುವ ಅಬ್ಯರ್ಥಿಗಳು ಸಂಬಂಧಪಟ್ಟ, ಮಾನ್ಯತೆ ಹೊಂದಿದ ಪ್ರಮಾಣ ಪತ್ರಗಳನ್ನು ಹಾಜರುಪಡಿಸಬೇಕು.
4. ನೇರ ಆಯ್ಕೆಯ ಸಮಯದಲ್ಲಿ ಅಭ್ಯರ್ಥಿಯು ದೈಹಿಕ ಕ್ಷಮತೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.
5. ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪ್ರಚಾರ ಅಥವಾ ಶಿಫಾರಸ್ಸುಗಳನ್ನು ಮಾಡಿದರೆ ಅಂಥವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಅಭ್ಯರ್ಥಿಗಳ ಪ್ರಮಾಣ ಪತ್ರಗಳ ಪರಿಶೀಲನೆ ಸಮಯದಲ್ಲಿ ಸುಳ್ಳು ಮಾಹಿತಿ ಅಥವಾ ಸುಳ್ಳು ದಾಖಲೆಗಳನ್ನು ನೀಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಯಾಗುವ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಆಯ್ಕೆಪಟ್ಟಿಯಲ್ಲಿ ಸೇರ್ಪಡೆಯಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿಗೆ ಹಕ್ಕನ್ನು ಪಡೆದುಕೊಳ್ಳುವುದಿಲ್ಲ.
7. ಯಾವುದೇ ಹಂತದಲ್ಲಿ ತಪ್ಪು ಮಾಹಿತಿಯ ಆಧಾರದ ಮೇಲೆ ಆಯ್ಕೆಯಾದ ಅಥವಾ ಅನರ್ಹತೆಯ ಕಾರಣಗಳಿಗಾಗಿ ಅಭ್ಯರ್ಥಿಯ ಹೆಸರನ್ನುಪಟ್ಟಿಯಿಂದ ಕೈಬಿಡುವ ಅಥವಾ ನೇಮಕಾತಿ ಆದೇಶವನ್ನು ರದ್ದುಪಡಿಸುವ ಅಧಿಕಾರವನ್ನು ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ)ಯು ಕಾಯ್ದಿರಿಸಿಕೊಂಡಿರುತ್ತದೆ.
8. ನೇಮಕಗೊಂಡ ಅಭ್ಯರ್ಥಿಗಳು ಗುತ್ತಿಗೆ ನೇಮಕಾತಿ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿಕೊಂಡು ರೂ.100/–ಗಳ ಮೌಲ್ಯದ ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪತ್ರವನ್ನು **"ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ**(ರಿ)**"** ರವರ ಹೆಸರಿನಲ್ಲಿ ಬರೆದು ನೀಡಬೇಕಾಗುತ್ತದೆ. ಈ ಆಧಾರದ ಮೇಲೆ ನೇಮಕಗೊಂಡ ಅಭ್ಯರ್ಥಿಗಳು ಖಾಯಂ ನೇಮಕಾತಿಗಾಗಿ ಯಾವ ಕಾರಣಕ್ಕೂ ನ್ಯಾಯಾಲಯದ ಮೊರೆ ಹೋಗುವಂತಿಲ್ಲ. ನೇಮಕಗೊಂಡ ಅಭ್ಯರ್ಥಿಗಳನ್ನು 01 ವರ್ಷದ ಅವಧಿಗೆ ಯಾ ರಾಷ್ಟ್ರೀಯ ನಗರ ಅಭಿಯಾನ ಯೋಜನೆಗೆ ತಾತ್ಕಲಿಕ ನೇಮಕಾತಿ ಮಾಡಿಕೊಳ್ಳುವುದು. ಸದರಿ ಯೊಜನೆ ಮುಗಿದ ನಂತರ ಈ ಹುದ್ದೆಗಳನ್ನು ರದ್ದುಪಡಿಸಲಾಗುವುದು. ಅಥವ ಅವಶ್ಯಕತೆ ಇದ್ದಲ್ಲಿ ಕರಾರಿನ ಮೇರೆಗೆ ಮುಂದಿನ ವರ್ಷಕ್ಕೆ ಮರು–ಒಪ್ಪಂದ ಮೂಲಕ ನಿಯೋಜಿಸಿಕೊಳ್ಳಲಾಗುವುದು.
9. ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಬಿಬಿಎಂಪಿ ಯ ವೆಬ್‌ಸೈಟ್: www.bbmp.gov.in. ನಲ್ಲಿ ಪ್ರಕಟಿಸಲಾಗುವುದು.
10. ಅಭ್ಯರ್ಥಿಗಳಿಂದ ಯಾವುದೇ ರೀತಿಯ ಆಕ್ಷೇಪಣೆಗಳಿದ್ದಲ್ಲಿ, ಅಂತಹ ಅಭ್ಯರ್ಥಿಗಳು ತಮ್ಮ ಆಕ್ಷೇಪಣೆಯನ್ನು ಮುಖ್ಯ ಆರೋಗ್ಯಾಧಿಕಾರಿಗಳು(ಸಾರ್ವಜನಿಕ ಆರೋಗ್ಯ) ಮತ್ತು ಸದಸ್ಯ ಕಾರ್ಯದರ್ಶಿಗಳ ಕಛೇರಿ, ಎನ್.ಆರ.ವೃತ್ತ, ಹಡ್ಸನ್ ವೃತ್ತ, ಬೆಂಗಳೂರು–02 ರವರಿಗೆ 2ರಿಂದ 7 ಕಾರ್ಯದ ದಿನದೊಳಗಾಗಿ ಪೋಸ್ಟ್/ಇ–ಮೇಲ್/ಖುದ್ದಾಗಿ ಸಂಪರ್ಕಿಸಿ ಸಲ್ಲಿಸತಕ್ಕದ್ದು.
11. ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ),ಯು ಕಾಯ್ದಿರಿಸಿಕೊಂಡಿದೆ ಮತ್ತು ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ),ಯ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.
12. ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇಮಕಾತಿ ಪ್ರಾಧಿಕಾರಿಯಾದ ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ), ಬೆಂಗಳೂರು ರವರು ಕಾಯ್ದಿರಿಸಿಕೊಂಡಿರುತ್ತಾರೆ.

1. **ಕೆಳಕಂಡ ದಾಖಲೆಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಿದೆಯೇ ಎಂದು ಖಚಿತ ಪಡಿಸಿಕೊಳ್ಳುವುದು**

- ಅಭ್ಯರ್ಥಿಗಳು ನೇರ ಆಯ್ಕೆ ನಡೆಯುವ ಸ್ಥಳದಲ್ಲಿ ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಖುದ್ದಾಗಿ ಸಲ್ಲಿಸಬೇಕು
- ಅಭ್ಯರ್ಥಿಗಳು ಸ್ವಯಂ ದೃಢೀಕರಣ ಮಾಡಿದ ಅವಶ್ಯವಿರುವ ಎಲ್ಲಾ ದಾಖಲಾತಿಗಳ ಎರಡು ನಕಲು ಪ್ರತಿಗಳನ್ನು ಸಲ್ಲಿಸಬೇಕು.

- ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕ ಪಟ್ಟಿ ಹಾಗು ಪ್ರಮಾಣ ಪತ್ರಗಳು

- ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉಧೃತ ಭಾಗ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಗಳ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದ್ದಲ್ಲಿ)
- ಎಲ್ಲಾ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಫೋಟೋಗಳನ್ನು ಸಲ್ಲಿಸಬೇಕು.
- ನೇರ ಆಯ್ಕೆಯ ದಿನದಂದು ಅಭ್ಯರ್ಥಿಗಳು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಬೇಕು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಸಹಿ/–
ಅಧ್ಯಕ್ಷರು
ಬೆಂಗಳೂರು ನಗರ ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಸಂಘ(ರಿ),
ಎನ್.ಯು.ಹೆಚ್.ಎಂ, ಬಿ.ಬಿ.ಎಂ.ಪಿ